ಆಂತರಿಕ ಚಲಾವಣೆಗೆ ಮಾತ್ರ

# ಅಂಕುರ

ಸ್ವಾಮಿ ವಿವೇಕಾನಂದ ಗ್ರಾಮಾಂತರ ಪದವಿ ಪೂರ್ವ ಕಾಲೇಜು ಚಂದಾಪುರ,ಆನೇಕಲ್ ತಾ.,ಬೆಂಗಳೂರು-560081
ಸಿಬ್ಬಂದಿ ಹಾಗು ವಿದ್ಯಾರ್ಥಿಗಳಿಂದ ಮಾಸಿಕ ವಾರ್ತಾ ಪತ್ರಿಕೆ
ಕನ್ನಡ ರಾಜ್ಯೋತ್ಸವದ ಪ್ರಯುಕ್ತ ವಿಶೇಷ ಸಂಚಿಕೆ

ಸಂಪುಟ-01/ಸಂಚಿಕೆ-03 ನವೆಂಬರ್-2020

## ಸಂಪಾದಕರ ನುಡಿ

ನವಂಬರ್ 1 ಬಂತೆಂದರೆ ಕರ್ನಾಟಕದ ಉದ್ದಗಲಕ್ಕೂ ಕನ್ನಡ ಸಂಭ್ರಮ. ಎಲ್ಲೆಲ್ಲಿ ನೋಡಿದರೂ ಹಳದಿ ಕೆಂಪಿನ ಬಾವುಟ ಕೈಬೀಸಿ ಕರೆಯುತ್ತದೆ. ಶಿಕ್ಷಣ ಕ್ಷೇತ್ರದಲ್ಲಿ ಭಾಗಿಗಳಾಗಿರುವ ನಾವೆಲ್ಲರೂ ಅತ್ಯಂತ ಸಡಗರ ಸಂಭ್ರಮದಿಂದ ಕನ್ನಡ ರಾಜ್ಯೋತ್ಸವವನ್ನು ಪ್ರತಿವರ್ಷ ಆಚರಣೆ ಮಾಡುತ್ತಿದ್ದೇವೆ.

ದ್ರಾವಿಡ ಭಾಷೆಗಳಲ್ಲಿ ಬಹಳ ಪ್ರಮುಖವಾದ ಭಾಷೆಯು ,ಬಹಳ ಪುರಾತನವಾದ ಭಾಷೆಯು ಆಗಿರುವ ನಮ್ಮ ಕನ್ನಡ ಭಾಷೆ ಅದರ ವಿವಿಧ ರೂಪಗಳಲ್ಲಿ ಸುಮಾರು 45 ದಶಲಕ್ಷ ಜನರು ಆಡುನುಡಿಯಾಗಿ ಬಳಸುತ್ತಿದ್ದಾರೆ. 6 ಕೋಟಿ 40 ಲಕ್ಷ ಜನ ಕನ್ನಡ ಮಾತನಾಡುತ್ತಾರೆ.ಸಾಹಿತ್ಯ, ವಿಜ್ಞಾನ, ಕ್ರೀಡೆ, ಹೀಗೆ ಪ್ರತಿ ಕ್ಷೇತ್ರದಲ್ಲೂ ಕರ್ನಾಟಕವು ತನ್ನದೇ ಆದ ಸಾಧನೆಯನ್ನು ಮಾಡಿದೆ. ಕನ್ನಡಿಗರಾದ ನಾವು ನಮ್ಮ ಇತಿಹಾಸ, ಸಾಹಿತ್ಯ, ಸಾಧನೆಗೈದ ಮಹನೀಯರ ಬಗ್ಗೆ ತಿಳಿದು ಗೌರವಭಾವ ಬೆಳೆಸಿಕೊಳ್ಳಬೇಕು . ಕನ್ನಡ ಹಾಗೂ ಕರ್ನಾಟಕದ ಏಳಿಗೆಗಾಗಿ ತಾಯಿ ಭುವನೇಶ್ವರಿಯ ಸೇವೆಯಲ್ಲಿ ನಮ್ಮನ್ನು ನಾವು ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು.

ಕನ್ನಡ ,ಕರ್ನಾಟಕ, ಕರುನಾಡು ಬರಿ ನೆಲವಲ್ಲ , ಕೇವಲ ಭಾಷೆಯಲ್ಲ ಅದೊಂದು ಭಾವನೆ ,ಅದೊಂದು ಬಾಂಧವ್ಯ . ಕನ್ನಡ ರಾಜ್ಯೋತ್ಸವದ ವೇಳೆ ಕನ್ನಡದ ಹಿರಿಮೆ



ಸಂಸ್ಥೆಯಲ್ಲಿ ಕನ್ನಡ ರಾಜ್ಯೋತ್ಸವ ಸಮಾರಂಭ

ಗರಿಮೆಗಳನ್ನು ನೆನಪಿಸಿಕೊಳ್ಳುವ 'ನವಂಬರ್ ಕನ್ನಡಿಗರು' ನಾವು ಆಗಬಾರದು. ಕನ್ನಡ ನಮ್ಮ ನಿತ್ಯೋತ್ಸವವಾಗಬೇಕು. ಕನ್ನಡದ ಉಳಿವಿಗಾಗಿ , ಶ್ರೇಯೋಭಿವೃದ್ಧಿಗಾಗಿ, ಬೆಳವಣಿಗೆಗಾಗಿ, ಶ್ರಮಿಸಿದ ಹಲವು ಹಿರಿಜೀವಗಳ ಹೆಬ್ಬಯಕೆ ಇದು. ಕರ್ನಾಟಕ ಹಾಗೂ ಕನ್ನಡ ನಾಡಿನ ಸಮಸ್ತ ಪ್ರಜೆಗಳು ರಾಷ್ಟ್ರಕವಿ ಕುವೆಂಪುರವರು ಬಯಸುವಂತೆ ವಿಶ್ವಮಾನವರಾಗಿ ,ಮನುಕುಲದ ಏಳಿಗೆಗಾಗಿ ಶ್ರಮಿಸಬೇಕು.

ಎಲ್ಲರಿಗೂ ಕರ್ನಾಟಕ ರಾಜ್ಯೋತ್ಸವದ ಶುಭಾಶಯಗಳು.

೦೩/೧೧/೨೦೨೦

# ಪ್ರತಿಬಿಂಬಗಳು

## ಸೋರುತಿಹುದು ಮನೆಯ ಮಾಳಿಗೆ..!

ಸಂವಹನ ಕ್ರಿಯೆಯಲ್ಲಿ ಆಧುನಿಕ ಸಮೂಹ ಮಾಧ್ಯಮಗಳು ಹೆಚ್ಚಿನ ಪರಿಣಾಮ ಬೀರುತ್ತಿರುವುದೇನೋ ಸರಿ. ಆದರೆ ಶ್ರೀಸಾಮಾನ್ಯರ ಮೇಲೆ ಹೇಗೆ ಪ್ರಭಾವ ಬೀರಬಹುದು ಎಂಬುದು ಗಮನಿಸಬೇಕಾದ ವಿಚಾರ. ಆಧುನಿಕ ಸಂದರ್ಭದಲ್ಲಿ ಒಂದು ಪ್ರದೇಶ, ಜನಾಂಗೀಯ, ಸಂಸ್ಕೃತಿ, ಜೀವನ, ಆಚರಣೆಯ ವಿಚಾರಗಳನ್ನು ಸಮೂಹ ಮಾಧ್ಯಮಗಳು ಹೇಗೆ ಪ್ರತಿನಿಧಿಸುತ್ತಿವೆ ಎಂಬುದು ಮುಖ್ಯವಾದ ಪ್ರಶ್ನೆಯಾಗಿದೆ.

ಒಂದು ಕಾಲದವರೆಗೆ ಸಮೂಹ ಮಾಧ್ಯಮಗಳು ಕೇವಲ ಓದು ಬರಹ ಬಲ್ಲವರ ಮೇಲೆ ಮಾತ್ರ ಪ್ರಭಾವ ಬೀರುತ್ತಿದ್ದವು. ಅದರಲ್ಲೂ ವಿದ್ಯಾವಂತರು ಮಾತ್ರ ಪತ್ರಿಕೆಗಳನ್ನು ಓದುತ್ತಿದ್ದರು. ಅವರು ಯಾವುದು ಸರಿ?ಯಾವುದು ತಪ್ಪು?ಎಂದು ನಿರ್ಧರಿಸಿ ಇತರರಿಗೆ ವಿಚಾರಗಳನ್ನು ವಿನಿಮಯ ಮಾಡುತ್ತಿದ್ದರು. ಹಾಗಾಗಿ ಸಮಾಜವು ಒಂದು ಮಟ್ಟಕ್ಕೆ ಸುಧಾರಿಸುತ್ತಿತ್ತು.ಆದರೆ ಈಗ ಪರಿಸ್ಥಿತಿ ಬದಲಾಗಿದೆ.ಇಂದು ಎಲ್ಲರ ಮನೆ ಮನಗಳಲ್ಲೂ ದೃಕ್ ಶ್ರವಣ ಮಾಧ್ಯಮಗಳು ಪ್ರಭಾವ ಬೀರುತ್ತಿವೆ.ಹಾಗಾಗಿ ದಿನದ 24 ಗಂಟೆಯೂ ಜನರನ್ನು ನಗಿಸಬಲ್ಲರು,24ಗಂಟೆಯೂ ಅಳಿ ಸಬಲ್ಲರು, ಶ್ರೀಸಾಮಾನ್ಯರು ಈ ಮಾಧ್ಯಮಗಳ ತಾಳಕ್ಕೆ ತಕ್ಕಂತೆ ಕುಣಿಯುವ ಕೈಗೊಂಬೆಗಳಾಗಿದ್ದಾರೆ.ಯಾವುದೋ ಧಾರಾವಾಹಿ ಬರುವುದೆಂದು ಹೊಲ ಗದ್ದೆ ತೋಟದ ಕೆಲಸವನ್ನು ಬಿಟ್ಟು ಸಮಯಕ್ಕೆ ಸರಿಯಾಗಿ ಹಾಜರಾಗುತ್ತಾರೆ ರೈತರು. ಹಾಗೆಂದು ಅವರಿಗೆ ಏನಾದರೂ ಅನುಕೂಲವಾಗುವಂತೆ ಅಲ್ಲಿ ಏನಾದರೂ ಹೇಳುತ್ತಿದ್ದಾರೆ ಎಂದರೆ ಶೂನ್ಯ. ಇನ್ನು ಪೌರಾಣಿಕ ಕಥೆಗಳು ಏನಾದರೂ ಬರುತ್ತಿದ್ದರಂತು ಮುಗಿದೇಹೋಯಿತು. ಟಿವಿಗೆ ಹಾರವನ್ನು ಹಾಕಿ,ಊದು ಬತ್ತಿ ಹಚ್ಚಿ, ಕೈ ಮುಗಿದು ಭಕ್ತಿಯನ್ನು ತೋರ್ಪಡಿಸಿಕೊಳ್ಳುವವರಿದ್ದಾರೆ.ಹಾಗೆಂದು ಅಲ್ಲಿಯ ನೀತಿಯನ್ನೇನಾದರೂ ಅಳವಡಿಸಿಕೊಂಡಿದ್ದಾರೆಯೇ, ಎಂದರೆ ಖಂಡಿತಾ ಇಲ್ಲ.

ಹಳ್ಳಿಯ ಮೌಲ್ಯವನ್ನೋ , ಸಂಸ್ಕೃತಿಯನ್ನೋ ವ್ಯಕ್ತಿಯನ್ನೋ,ವಸ್ತುವನ್ನೋ ಅಥವಾ ಇನ್ನಿತರ ವಿಚಾರಗಳನ್ನೋ ಹೊರ ಜಗತ್ತಿಗೆ ಪರಿಚಯಿಸುವುದು ತುಂಬಾ ಮುಖ್ಯ. ತಿಳಿಸೋಣವೆಂದರೆ ಯಾವುದೇ ಪ್ರಾಯೋಜಕರು ಮುಂದೆ ಬರುವುದಿಲ್ಲ. ಯಾರಿಗೂ ವಾಸ್ತವ ಬೇಕಿಲ್ಲ.ಕೇವಲ ಉತ್ಸವಮೂರ್ತಿಗಳಾಗಿ ತೋರ್ಪಡಿಸಿ ಕೊಳ್ಳುತ್ತಿದ್ದಾರೆ. ಎಲೆಮರೆಯ ಕಾಯಿಯಂತೆ ಮರೆಯಾಗಿದೆ ವಿಚಾರಗಳು. ಹಳ್ಳಿಯ ಮುಗ್ಧ ಜನರ ಮೇಲಂತೂ ಹಲವಾರು ಜಾಹೀರಾತುಗಳು ಅದರಲ್ಲೂ ಮಕ್ಕಳ ಹಾಗೂ ಹೆಂಗಸರ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುತ್ತಿವೆ. ಅವರನ್ನೇ ಕೇಂದ್ರವನ್ನಾಗಿಟ್ಟುಕೊಂಡು ಹಲವಾರು ಕಾರ್ಯಕ್ರಮಗಳು ಪ್ರಾರಂಭವಾಗಿರುವುದು ಸತ್ಯ. ಇದರ ಪರಿಣಾಮ ಹಳ್ಳಿ ನಗರಗಳಿಗೆ ವ್ಯತ್ಯಾಸವಿಲ್ಲ ದಂತಾಗಿದೆ. ಹಸಿರಿನ ತವರೂರು ಅನಾಥವಾಗುತ್ತಿದೆ.

ಅಜ್ಞಾನವನ್ನು ಸೋರುವಿಕೆಗೆ ಸಂಕೇತಿಸಿರುವ ಶರೀಫರ ಸೋರುತಿಹುದು ಮನೆಯ ಮಾಳಿಗೆ ನೆನಪಿಗೆ ಬರುತಿದೆ. ಮನೆಯ ಮಾಳಿಗೆ ಸೋರಿದರೆ ಮನೆಮಂದಿಗೆ ಆಶ್ರಯವೆಲ್ಲಿ . ನಮ್ಮ ದೇಶದ ಹಿರಿಮೆ ಗರಿಮೆಯೇ ನಮ್ಮ ಸಂಸ್ಕೃತಿ.ಆದರೆ ಇಂದು ನಮ್ಮ ಸಂಸ್ಕೃತಿಯನ್ನು ಹೊರಗಿನವರಿಗೆ ಆಕರ್ಷಕವಾಗಿ ತೋರುವಲ್ಲಿ ಸೋಲುತ್ತಿದ್ದೇವೆ. ಸಾಂಸ್ಕೃತಿಕ ಸರಕೀಕರಣಕ್ಕೆ ಮುಂದಾಗಿದ್ದೇವೆ. ಆದರೆ

ಇದು ರೋಗದ ಮಾರ್ಗ. ಮಾಧ್ಯಮಗಳು ತಮ್ಮ ಆಲೋಚನೆಯಲ್ಲಿ ಆಂತರಿಕವಾಗಿ ಬೌದ್ಧಿಕವಾಗಿ ಬೆಳವಣಿಗೆಯಾದರೆ ಮಾತ್ರ ನಾವು ಗುರುತಿಸಬಹುದು ಆದರೆ ಇಂದು ಆಗುತ್ತಿರುವುದೇನು.ನಮ್ಮ ಸೀರೆಯನ್ನು ಪರಿಚಯಿಸಲು ವಿದೇಶಿಯ ಹೆಣ್ಣುಮಕ್ಕಳ ಮೊರೆ ಹೋಗುತ್ತಿದ್ದಾರೆ. ಹಲವು ಜಾಹೀರಾತುಗಳ ಪೇಟೆಂಟ್ ತೆಗೆದುಕೊಳ್ಳುವ ಬಂಡವಾಳ ಶಾಹಿಗಳು ತೃತೀಯ ಜಗತ್ತಿನ ಸಂಸ್ಕೃತಿಯನ್ನು ತೇಜೋವಧೆ ಮಾಡುತ್ತಿದ್ದಾರೆ.ಮೀನುಗಾರರನ್ನು ತೋರದೆ ಇಂದು ಪೆವಿಸ್ಟಿಕ್ ಮಾರಾಟವಾಗುತ್ತಿಲ್ಲ. ಅದು ಬಿಡಿ ಹೆಣ್ಣುಮಗಳ ಹಣೆಯ ಕುಂಕುಮವನ್ನು ಮುಂದಿಟ್ಟು ಮಾರಾಟ ಮಾಡುತ್ತಿದ್ದಾರೆ.ಹಣೆಯ ಕುಂಕುಮ ನಮ್ಮಲ್ಲಿ ಎಂತಹ ಮಾದರಿಯಲ್ಲವೇ. ಹಲವಾರು ಸಾಂಬಾರ್ ಪದಾರ್ಥಗಳು ಮಾರಾಟವಾಗಬೇಕಾದರೆ ನಮ್ಮ ಅಜ್ಜ ,ಅಜ್ಜಿ, ಅಮ್ಮ ಇವರ ಕೈರುಚಿ ನೆನಪಿಸಲೇಬೇಕು .ರಾಮಾಯಣದ ಪ್ರಮುಖ ಪಾತ್ರ ರಾವಣನನ್ನು ತೋರಿ ಜಂಡುಬಾಂಬ್ ಮಾರಾಟ ಮಾಡುತ್ತಿದ್ದಾರೆ. ದ್ರೌಪದಿಯನ್ನು ತೋರಿ ಬಿಸ್ಕೆಟ್ ಮಾರಾಟ ಮಾಡುತ್ತಿದ್ದಾರೆ.ರಸ್ತೆಬದಿಯಲ್ಲಿ ಜೀವನ ಸಾಗಿಸುವ ಚಪ್ಪಲಿ ಅವನನ್ನು ತೋರದೆ ಬಾಟ ಶೋರೂಮಿನ ಚಪ್ಪಲಿಗಳು ಮಾರಾಟ ವಾಗಲಾರದು. ಒಬ್ಬ ಕಸ ತೆಗೆಯುವ ವನ ನ್ನು ತೋರಿಸದೆ ಮೊಬೈಲ್ ಮಾರಾಟ ವಾಗಲಾರದು, ದೇವರನ್ನು ತೋರದೆ ಪೂಜಾ ಪರಿಕರಣಗಳು ಮಾರಾಟವಾಗಲಾರವು .ಹೀಗೆ ಬರೆಯುತ್ತಾ ಹೋದರೆ ಬೆಳೆಯುತ್ತಲೇ ಹೋಗುತ್ತದೆ. ಇವೆಲ್ಲಾ ನಮ್ಮ ಸಂಸ್ಕೃತಿಯ ಪ್ರತೀಕವಲ್ಲವೆ ಹೀಗೆ ಸೋರಿಕೆ ಯಾದರೆ? ಮೀನುಗಾರನೇ ಆಗಲಿ, ಚಪ್ಪಲಿಯವನೇ ಆಗಲಿ, ನಮ್ಮ ಪೌರಾಣಿಕ ವ್ಯಕ್ತಿಗಳೇ ಆಗಲಿ, ಒಬ್ಬ ರೈತನೇ ಆಗಲಿ,ತರಕಾರಿ ಮಾರಾಟಗಾರರೇ ಆಗಲಿ,ಪೊಲೀಸರೇ ಆಗಲಿ, ಶಿಕ್ಷಕರಾಗಲಿ ಪ್ರತಿಯೊಬ್ಬರಿಗೂ ತಮ್ಮದೇ ಆದ ಜೀವನಕ್ರಮ ಇರುತ್ತದೆ.ತಮ್ಮ ತಮ್ಮ ಸ್ವಾರ್ಥಕ್ಕಾಗಿ ಅದನ್ನು ಒಡೆಯಬಾರದಲ್ಲವೇ?

ಭಾರತೀಯ ಸಂಪ್ರದಾಯದಲ್ಲಿ ಬೆವರು ವಿಶೇಷ ಪಾತ್ರವಹಿಸುತ್ತದೆ.ಏಕೆಂದರೆ ಮಗುವನ್ನು ಹಡೆದ ತಾಯಿ ಮಗುವಿನ ನೆತ್ತಿಯನ್ನು ಮೂಸಿ ತನ್ನ ಮಗುವನ್ನು ಪತ್ತೆ ಹಚ್ಚುತ್ತಿದ್ದಳಂತೆ.ಆದರೆ ಇಂದು ಹಲವಾರು ಜಾಹೀರಾತುದಾರರು ಇದನ್ನು ಬಂಡವಾಳವನ್ನಾಗಿ ಮಾಡಿಕೊಂಡು ಬಗೆಬಗೆಯ ಸುಗಂಧದ್ರವ್ಯಗಳನ್ನು ಮಾರಾಟ ಮಾಡುತ್ತಿದ್ದಾರೆ.ಸಾಮಾನ್ಯವಾಗಿ ಮಕ್ಕಳಿಗೆ ಬೆವರಿನ ವಾಸನೆ ಬರುವುದಿಲ್ಲ.ಆದರೂ ಅದಕ್ಕೆ ಮಾರುಹೋಗುವವರ ಸಂಖ್ಯೆ ಹೇರಳವಾಗಿದೆ.ಇದಿಷ್ಟೇ ಅಲ್ಲ ಅವರವರ ಹುಟ್ಟಿಗೆ ಅನುಗುಣವಾಗಿ ಅವರ ಸೌಂದರ್ಯ, ಬಣ್ಣ,ಕೂದಲ ಬೆಳವಣಿಗೆ,ಶಾರೀರಿಕ ಬೆಳವಣಿಗೆ, ಕೆಲವು ಬೌದ್ಧಿಕ ಬೆಳವಣಿಗೆಗಳು ಅನುವಂಶೀಯವಾಗಿ ಇರುವುದು ಎಲ್ಲರಿಗೂ ತಿಳಿದಿರುವ ವಿಷಯವೇ ಆದರೆ ಇಂದು ಜಾಹೀರಾತುಗಳಲ್ಲಿ ಅವುಗಳ ಪ್ರದರ್ಶನ ಮಾಡುವ ಮೂಲಕ ಪ್ರಕೃತಿ ವಿರುದ್ಧ ಹೋರಾಟಕ್ಕೆ ನಿಂತಿದ್ದಾರೆ. ಈ ಸೆಣಸಾಟದಲ್ಲಿ ಮಾನವ ಗೆಲ್ಲಲು ಸಾಧ್ಯವೇ?

ಮಕ್ಕಳನ್ನು ಚಾಕಲೇಟು ತಿನ್ನಬೇಡಿ ಎಂದರೆ ಚಾಕಲೇಟು ಕಂಪನಿಗಳು ಬಾಗಿಲು ಹಾಕಬೇಕಾಗುತ್ತದೆ.ಸೀಗೆಪುಡಿ ಬಳಕೆ ಮಾಡಿದರೆ ಶಾಂಪು ಕಂಪನಿಗಳು ಮನೆಗೆ ಹೋಗಬೇಕಾಗುತ್ತದೆ.ಹರಳೆಣ್ಣೆ ಬಳಕೆ ಮಾಡಿದರೆ ಸಂಬಂಧಿಸಿದ ಇತರ ಕಂಪನಿಗಳು ಬೀದಿಗೆ ಬರಬೇಕಾಗುತ್ತದೆ.ಬೆಳೆಯುತ್ತಾ ಹೋಗುತ್ತದೆ. ಅದೇನೇ ಇರಲಿ ವಾಸ್ತವಕ್ಕೆ ದೂರವಾದ ವಿಚಾರಗಳು ಎಂದೂ ನಮಗೆ ನೈಜ ಜೀವನವನ್ನು ಒದಗಿಸಿ ಕೊಡಲಾರವು ಎಂಬುದು ಸತ್ಯ. ಈಗಾಗಲೇ ಇರುವ ಹಲವಾರು ಸಮಸ್ಯೆಗಳ ನಡುವೆ ಮಾಧ್ಯಮಗಳು ಉಂಟುಮಾಡುತ್ತಿರುವ ಗೊಂದಲಗಳು ಜನರನ್ನು ತಪ್ಪುದಾರಿಗೆ ಎಳೆಯುತ್ತಿರುವುದು ಸತ್ಯ.ಇವೆಲ್ಲವೂ ನಮ್ಮ ಭಾರತೀಯ ಕಾವ್ಯ, ಪುರಾಣ, ಸಂಸ್ಕೃತಿಯ ಸೋರಿಕೆಗೆ ಸೂಕ್ಷ್ಮವಾಗಿ ಕಾರಣವಾಗುತ್ತಿದೆ.

ಮನುಷ್ಯ ಇಂದು ಪ್ರಮುಖವಾಗಿ ಮೂರು ವಿಚಾರಗಳನ್ನು ಕುರಿತು ಆಲೋಚಿಸಬೇಕಾಗಿದೆ ನಾವು ಹಿಂದಿನವರಿಂದ ಪಡೆದಿದ್ದೇನು?ಈಗ ಮಾಡುತ್ತಿರುವುದೇನು? ಮುಂದಿನವರಿಗೆ ಕೊಡಬೇಕಾಗಿರುವುದೇನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡಾಗ ಮಾತ್ರ ನಾವು ಬದುಕುಳಿಯಲು ಸಾಧ್ಯ. ನಮ್ಮ ದೇಶದ ಸಂಸ್ಕೃತಿಯ ಮಾಳಿಗೆ ಈ ಜಾಗತೀಕರಣದ ವ್ಯಾಪಾರಕ್ಕೆ, ಜಾಹೀ ರಾತುಗಳ ಪ್ರದರ್ಶನಕ್ಕೆ, ವ್ಯಾಪಾರಿಯ ದೋರಣೆಯ ವ್ಯವಹಾರಕ್ಕೆ ಸೋರುವಂತಾಗಿದೆ. ಪ್ರದರ್ಶನವೇನೋ ಸರಿ ಆದರೆ ನಿದರ್ಶನಕ್ಕೆ ದೂರವಾಗಿರಬಾರದಲ್ಲವೇ? ಮಾಧ್ಯಮಗಳು ಒಮ್ಮೆ ಗಮನಿಸಬೇಕು.

ಶ್ರೀಮತಿ ರೂಪಾದೇವಿ ಎ ಎಸ್

ಉಪನ್ಯಾಸಕಿ ಕನ್ನಡ ವಿಭಾಗ




ಅಂಕಿತಾ.ಡಿ
ದ್ವಿ.ಪಿಯುಸಿ ಬಿ ವಿಭಾಗ

## ಆದರ್ಶ

ಧೈರ್ಯ ಎಂದರೆ ತಂದೆ,
ಸ್ಫೂರ್ತಿ ಎಂದರೆ ತಾಯಿ,
ಗುರಿಯೆಂದರೆ ಶಿಕ್ಷಕ,
ಇವುಗಳೇ ಜೀವನದ ಆದರ್ಶ ತತ್ವಗಳು.

## ಸ್ಫೂರ್ತಿ

ನನ್ನ ಕವಿತೆಗೆ ಅಂಕುರ ಪತ್ರಿಕೆ ಸ್ಫೂರ್ತಿ,
ನನ್ನ ಬರವಣಿಗೆಗೆ ಲೇಖನಿಯ ಸ್ಫೂರ್ತಿ,
ನನ್ನ ಸಾಧನೆಗೆ ವಿದ್ಯೆಯೇ ಸ್ಫೂರ್ತಿ,
ನನ್ನ ಜೀವನದ ಆದರ್ಶ ಬದುಕಿಗೆ
ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯೇ
ಸ್ಫೂರ್ತಿ.

ಶ್ರೇಯಾಂಕ ವೈ. ಹೆಚ್
ಪ್ರ ಪಿಯುಸಿ ಬಿ ವಿಭಾಗ

